


International Journal of Kannada Research
www.kannadajournal.com

**ISSN: 2454–5813**
IJKR 2019; 5(2): 05-09
© 2019 IJKR
www.kannadajournal.com
Received: 03-02-2019
Accepted: 06-03-2019

**ವಿ. ಶ್ರೀನಿವಾಸ್**
ಸಂಶೋಧಕರು, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಮಗೋತ್ರಿ. ಮೈಸೂರು

**Correspondence**
**ವಿ. ಶ್ರೀನಿವಾಸ್**
ಸಂಶೋಧಕರು, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಮಗೋತ್ರಿ. ಮೈಸೂರು

# ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಮೈಸೂರು ಜಿಲ್ಲೆಯ ಜೇನುಕುರುಬ ಸಮುದಾಯದ ಒಂದು ವಿಸ್ತೃತ ಅಧ್ಯಯನ

**ವಿ. ಶ್ರೀನಿವಾಸ್**

## ಪ್ರಸ್ತಾವನೆ

ಬದಲಾವಣೆ ಎಂಬುದು ಒಂದು ಸಮುದಾಯವು ತನ್ನದೆ ವ್ಯವಸ್ಥೆಯಿಂದ ಮತ್ತೊಂದು ಹೊಸ ವ್ಯವಸ್ಥೆಗೆ ವರ್ಗಾವಣೆಯಾಗುವುದು ಅಥವಾ ಬದಲಾಗುವುದು. ಈ ಬದಲಾವಣೆಯು ಸ್ವಾಭಾವಿಕವಾಗಿ ಅಥವಾ ಒತ್ತಡಪೂರ್ವಕವಾಗಿ ನಡೆಯುತ್ತದೆ. ಸ್ವಾಭಾವಿಕವಾಗಿ ಉಂಟಾದರೆ ಸ್ವಾಂಗಿಕರಣಕ್ಕೆ ದಾರಿ ಮಾಡಿಕೊಡುತ್ತದೆ ಮತ್ತು ನೈಜತೆಯನ್ನು ಉಳಿಸಿಕೊಂಡಿರುತ್ತದೆ. ಆದರೆ, ಒತ್ತಡಪೂರ್ವಕವಾಗಿ ನಡೆಯುವ ಬದಲಾವಣೆ ಕ್ರಮಗಳು ಸಮುದಾಯಗಳ ನಡುವೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುತ್ತವೆ. ಆದುದರಿಂದ, ಮೈಸೂರು ಜಿಲ್ಲೆಯಲ್ಲಿ ವಾಸಿಸುತ್ತಿರುವ ಜೇನುಕುರುಬ ಸಮುದಾಯದ ಜನರ ಮೇಲೆ, ಅವರ ಬದುಕಿನ ಕ್ರಮದ ಮೇಲೆ ಆಧುನಿಕತೆಯ ಪರಿಣಾಮದಿಂದ ಬದಾಗುತ್ತಿರುವ ಅಥವಾ ಬದಲಾಗಿರುವ ಸಮುದಾಯದ ಗುಣಗಳನ್ನು ವಿವಿಧ ಆಯಾಮಗಳಲ್ಲಿ ವಿಶ್ಲೇಷಿಸಲಾಗಿದೆ. ಇದೆಲ್ಲದರ ಬದಲಾವಣೆ ಕುರಿತ ವಿಸ್ತೃತ ಅಧ್ಯಯನವನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಜೇನುಕುರುಬರು ಸಾಮಾನ್ಯವಾಗಿ ಮೈಸೂರು ಜಿಲ್ಲೆಯ ತಾಲ್ಲೋಕುಗಳಾದ ಹುಣಸೂರು, ನಂಜನಗೂಡು, ಹೆಚ್. ಡಿ. ಕೋಟೆ, ಮತ್ತು ಪಿರಿಯಾಪಟ್ಟಣ ವ್ಯಾಪ್ತಿಯಲ್ಲಿ ಪ್ರಮುಖವಾಗಿ ಕಾಡು ಪ್ರದೇಶಗಳಲ್ಲಿ (ಪ್ರಸ್ತುತ ಇವರು ಕಾಡಿನ ಅಂಚಿನಲ್ಲಿ ವಾಸವಾಗಿದ್ದಾರೆ (ನೆಲೆಯೂರಿದ್ದಾರೆ). ಜೇನುಕುರುಬ ಸಮುದಾಯದವರು ಶಾಂತಿ, ಸಹನೆ,ಸಹಬಾಳ್ವೆ, ಸಾಮರಸ್ಯ, ನಿಸ್ವಾರ್ಥ ಪರತೆಯಂತಹ ಮಾದರಿ ಮೌಲ್ಯವನ್ನು ಹೊಂದಿದ್ದು ತಮ್ಮದೇ ಪರಿಮಿತಿಯಲ್ಲಿ ಸರಳ ಮತ್ತು ಮೌಲ್ಯಾಧಾರಿತ ಬದುಕನ್ನು ಕಟ್ಟಿಕೊಂಡಿದ್ದಾರೆ. ಆದರೆ ಪ್ರಸ್ತುತ ದಿನಗಳಲ್ಲಿ ಸಮಾಜದಲ್ಲಾಗುತ್ತಿರುವ ಅನೇಕ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಹಾಗೂ ಜಾಗತಿಕ ಬದಲಾವಣೆಗಳಿಂದ ಈ ಸಮುದಾಯದ ಮೇಲಿನ ಪರಿಣಾಮವನ್ನು ತಿಳಿಯುವುದು ಅವಶ್ಯಕವಾಗಿದೆ. ಗಿರಿಜನರು ಅಥವಾ ಬುಡಕಟ್ಟು ಜನರು ತಮ್ಮದೇ ಆದ ವಿಶೇಷ ಸಾಂಸ್ಕೃತಿಕ ಮತ್ತು ಸಾಮಾಜಿಕ ಮೌಲ್ಯವನ್ನು ಹೊಂದಿವೆ. ಆದರೆ, ಆದನಿಕ ಸಮಾಜದ ಮುಖ್ಯವಾಹಿನಿಗೆ ಬರುವ ನಿಟ್ಟಿನಲ್ಲಿ ಇವರ ಅತ್ಯಮೂಲ್ಯ ಜೀವನಕ್ರಮಗಳು ಬದಲಾವಣೆಗೆ ಒಳಪಟ್ಟಿವೆ.

ಆಧುನಿಕ ಸಂಸ್ಕೃತಿಯ ನಾಗಾಲೋಟದಲ್ಲಿ ಊಹೆಗೂ ನಿಲುಕದ ಬದಲಾವಣೆಗಳು ನಮ್ಮ ನಾಗರೀಕ ಸಮಾಜದಲ್ಲೇ ಗಮನಿಸಬಹುದಾಗಿದೆ. ಇದರ ಪರಿಣಾಮ ಕಾಲಾನಂತರದಲ್ಲಿ ತಮ್ಮ ಪ್ರತಿ ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು ಆದಿವಾಸಿಗಳು ಮುಖ್ಯವಾಹಿನಿಯಲ್ಲಿನಜನರನ್ನು ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಇದು ಆದಿವಾಸಿಗಳ ಬದುಕನ್ನು ಬದಲಾವಣೆಯ ಘರ್ಷಣೆಗೆ ಒಳಪಡಿಸಿತ್ತು. ಇದರ ಜೊತೆಗೆ ಅರಣ್ಯ ಸಂರಕ್ಷಣಾ ಕಾನೂನುಗಳು, ಪರಿಸರ ಹೋರಾಟಗಳು, ಜಾಗತಿಕ ಸಮುದಾಯದ ಒತ್ತಡಗಳು, ಈ ಸಮುದಾಯದ ಅರಣ್ಯದ ಹಕ್ಕನ್ನು ಕಬಳಿಸಲಾರಂಬಿಸಿದವು. ಇದರಿಂದಾಗಿ ಸ್ವಾವಲಂಬನೆಯನ್ನು ದಿನೆದಿನೆ ಕಳೆದುಕೊಳ್ಳಲಾರಂಬಿಸಿದ ಆದಿವಾಸಿಗಳು, ಸಮಾಜದ ಮುಖ್ಯವಾಹಿನಿಗೆ ಮತ್ತು ಸರ್ಕಾರದ ಮೇಲೆ ಅವಲಂಬಿಸಬೇಕಾದ ಸ್ಥಿತಿ ನಿರ್ಮಾಣವಾಯಿತು. ಇವರಿಗೆ ಧ್ವನಿಯಾಗಿದ್ದ ಸ್ವಯಂ ಸೇವಾ ಸಂಘ ಸಂಸ್ಥೆಗಳು ಅರಣ್ಯನಾಶ, ಬರಗಾಲ, ಜಾಗತಿಕ ತಾಪಮಾನ, ಹಸಿರುಮನೆ ಪರಿಣಾಮ ಮುಂತಾದವುಗಳಿಗೆ ಸೂಕ್ತ ಕಾರಣಗಳನ್ನು ಹುಡುಕುವಲ್ಲಿ ವಿಫಲರಾಗಿ, ಅರಣ್ಯದ ಸಂರಕ್ಷಣೆಯೊಂದೇ ಇದಕ್ಕೆ ಸೂಕ್ತ ಪರಿಹಾರ ಎಂಬ ಎಚ್ಚರಿಕೆ ಘಂಟೆಯನ್ನು ನೀಡಿದವು. ಕೆಲವು ಸ್ವಯಂ ಘೋಷಿತ ಸೇವಾ ಸಂಸ್ಥೆಗಳು ಈ ಸಮುದಾಯದ ಅಭಿವೃದ್ಧಿ ಹೆಸರಲ್ಲಿ ಹಣವನ್ನು ದುರುಪಯೋಗ ಪಡಿಸಿಕೊಂಡು ಈ ಸಮುದಾಯವನ್ನು ನಿರ್ಲಕ್ಷಿಸಿದವು. ಇದೆಲ್ಲದರ ನಡುವೆ ಜೇನುಕುರುಬ ಸಮುದಾಯವನ್ನು ಒಳಗೊಂಡಂತೆ ಕಾಡಿನಲ್ಲಿ ವಾಸಿಸುವ ಎಲ್ಲಾ ಗಿರಿಜನರ ಸರ್ವಾಂಗೀಣ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸಿವೆ. ಜೊತೆಗೆ ಗಿರಿಜನರಿಗೆ ಅಭಿವೃದ್ಧಿಯ ಆಶಾಗೋಪುರ ತೋರಿಸುತ್ತಿವೆ. ಆದರೆ ಇವೆಲ್ಲವುಗಳಿಂದ ಸಂಪೂರ್ಣ ಯಶಸ್ಸು ಅಥವಾ ಬದಲಾವಣೆ ಸಿಗದೆ ಸಮುದಾಯಗಳ ಬದುಕು ಇನ್ನೂ ಅತಂಥ್ರ ಸ್ಥಿತಿಯಲ್ಲಿ ಇವೆ.

ಪುನರ್ವಸತಿಯೆಂಬುದು ಗಿರಿಜನರಿಗೆ ಅರಣ್ಯ ಪ್ರದೇಶದಿಂದ ಬೇರೆಡೆಗೆ ಸ್ಥಳಾಂತರಿಸಲು ಬಂದಂತಹ ಯೋಜನೆಯಾಗಿದೆ. ಇದರ ಅಡಿಯಲ್ಲಿ ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯದಲ್ಲಿ ವಾಸಿಸುತ್ತಿದ್ದ ಕೆಲವು ಕುಟುಂಬಗಳನ್ನು ಕಾಡಂಚಿನ ಪ್ರದೇಶಗಳಿಗೆ ಸ್ಥಳಾಂತರಿಸಿ ಅಲ್ಲಿ ಅವರಿಗೆ ಬದುಕು ಕಟ್ಟಿಕೊಡಲು ಪ್ರಯತ್ನಿಸಿದ ಯೋಜನೆ ಇದಾಗಿದೆ. ಈ ಯೋಜನೆಯ ನೀತಿ–ನಿಯಮಗಳು ಹಾಗೂ ರೂಪು–ರೇಷೆಗಳು ಉತ್ತಮವಾಗಿದ್ದವು. ಆದರೆ ಇದರ ಅನುಷ್ಠಾನದಲ್ಲಿ ಉಂಟಾದ ಹಲವು ಲೋಪದೋಷಗಳುಯೋಜನೆಯನ್ನು ಮತ್ತಷ್ಟು ಕಗ್ಗಂಟಾಗಿಸಿವೆ. ಇದರಿಂದ ಈ ಸಮುದಾಯ ಕಾಡಿನಲ್ಲಿ ಇರಲೂ ಆಗದೆ ಹೊರಬರಲು ಆಗದೆ ಚಡಪಡಿಸುತ್ತಿದೆ ಮತ್ತು ಸಾಂಸ್ಕೃತಿಕ ಅಂತರ ಇವರನ್ನು ಕಾಡುತ್ತಿದೆ.ಈ ರೀತಿಯ ಮನಸ್ಥಿತಿಗಳು ಮುಖ್ಯವಾಹಿನಿ ಸಮುದಾಯದ ಜೊತೆಗಿನ ಇವರ ಸಹ–ಜೀವನವನ್ನು ತುಂಡರಿಸಿದೆ.

**ಜೇನುಕುರುಬ ಸಮುದಾಯದ ವಾಸಸ್ಥಳದ ಬದಲಾವಣೆ**

ಕುರುಬ ಎಂಬ ಪದತಮಿಳಿನ‘ಕೊ’ಅಥವಾ ‘ಕು’ ಎಂಬಪದದವಿಸ್ತೃತ ರೂಪವೇ‘ಕುರು’. ಕುರುಅಂದರೆ‘ಬೆಟ್ಟ’ ಎಂದರ್ಥ, ಕಾಲಾನಂತರದಲ್ಲಿ ಇವರಲ್ಲಿಯಹಲವರು ತಮ್ಮಬದುಕನ್ನು ಜೇನು ಸಂಗ್ರಹಣೆಗೆಂದುಮುಡಿಪಿಟ್ಟ ಕಾರಣ ಇವರನ್ನು‘ಜೇನುಕುರುಬರು’ ಎಂದು ಕರೆಯಲಾಗುತ್ತಿದೆ. ಜೇನುಉರುಬರನ್ನು ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಮದ ಕರೆಯಲ್ಪಡುತ್ತಾರೆ. ಕೇರಳದ ಎತ್ತರದ ಬೆಟ್ಟಗಳಲ್ಲಿವಾಸಿಸುವ ಜೇನುಕುರುಬರನ್ನು ‘ಕಾಟ್ಟುನಾಯಕನ್’, ‘ಶೋಲ ನಾಯಕನ್’, ‘ಪೇನ್ ಕುರುಮನ್’ ಮತ್ತು ‘ಜೇನ ಕೋಯಶೋಲ’ ಎಂಬ ಹೆಸರುಗಳಿಂದ ಕರೆಯುತ್ತಾರೆ. ಮೈಸೂರು ಜಿಲ್ಲೆಯ ಜೇನುಕುರುಬರು ಪಾರಂಪರಿಕವಾಗಿ ಅರಣ್ಯದ ಒಳಗೆ ವಾಸಮಾಡುತ್ತಿದ್ದರು. ಆದರೆ ಇಂದು ಸರ್ಕಾರದ ನಿಯಮಾನುಸಾರವಾಗಿ ಕಾಡಿನಿಂದ ಹೊರಬಂದು ಕಾಡಂಚಿನಲ್ಲಿ ಮತ್ತು ಸಮಾಜದ ಮುಖ್ಯವಾಹಿನಿ ನಡುವೆ ವಾಸಮಾಡಬೇಕಾದ ಅನಿವಾರ್ಯತೆ ಇದೆ. ಇವರು ವಾಸಮಾಡುವ ಪ್ರದೇಶವನ್ನು ‘ಹಾಡಿ’ ಎಂದು ಕರೆಯಲಾಗುತ್ತದೆ. ಆದರೆ ಇಂದು ಮೈಸೂರು ಜಿಲ್ಲೆಯ ಹಲವು ಹಾಡಿಗಳು ಸರ್ಕಾರದ ನೀತಿಗಳಿಂದ ಕಾಲೋನಿಗಳಾಗಿ ಮಾರ್ಪಟ್ಟಿರುವುದನ್ನು ನಾವು ಗಮನಿಸಬಹುದಾಗಿದೆ.

ಇಲ್ಲಿ ಜೇನುಕುರುಬರ ಹಾಡಿಗಳ ಸ್ಥಳನಾಮಗಳು ಹಿಂದೆ ಬೇರೆಯೇ ಇದ್ದು, ಇತ್ತೀಚಿನ ದಿನಗಳಲ್ಲಿ ಪರಿವರ್ತನೆ ಹೊಂದಿರುವುದನ್ನು ಕಾಣಬಹುದಾಗಿದೆ. ಹಿಂದೆ ಜೇನುಕುರುಬ ಹಾಡಿಗಳಿಗೆ ಪ್ರವೇಶಿಸಬೇಕಾದರೆ ಸರ್ಕಾರಿ ಅಧಿಕಾರಿಗಳಿಗೆ, ಇತರರಿಗೆ ಹಲವಾರು ನೀತಿ–ನಿಯಮಗಳಿದ್ದವು. ಯಜಮಾನನ ಅನುಮತಿ ಪಡೆಯುವುದು, ಯಾರನ್ನಾದರೂ ಸಂಪರ್ಕಿಸಬೇಕಾದರೆ ನಿರ್ದಿಷ್ಟಪಡಿಸಿರುವ ಸ್ಥಳದಲ್ಲಿಯೇ ಸಂಪರ್ಕಿಸಬೇಕೆಂಬ ನಿರ್ಬಂಧ, ಅವರ ಮನೆಯ ಬಳಿಗೆ ರಕ್ತ ಸಂಬಂಧಿಗಳು, ಅವರ ಹಾಡಿಯವರನ್ನು ಹೊರತು ಪಡಿಸಿ ಮತ್ತಾರನ್ನು ಸೇರಿಸಿಕೊಳ್ಳಬಾರದೆಂಬ ನಿಯಮಗಳಿದ್ದವು. ಆದರೆ ಇಂದು ಯಾರು ಬೇಕಾದರೂ ಹಾಡಿಯ ಒಳಗೆ ತೆರಳಬಹುದು, ನೀರು ಕುಡಿಯಬಹುದು, ಉಳಿದುಕೊಳ್ಳಬಹುದು. ಆದರೆ ಬದಲಾದ ಕಾಲಘಟ್ಟದಲ್ಲಿ ವಿವಿಧ ಸಂಘ ಸಂಸ್ಥೆಗಳು ಈ ಸಮುದಾಯದವರನ್ನು ಕ್ರಮೇಣವಾಗಿ ಬದಲಾವಣೆಗೊಳಪಡುವ ಹಾದಿಯಲ್ಲಿವೆ. ಇವುಗಳ ಪ್ರಯೋಜನವನ್ನು ಜೇನುಕುರುಬ ಸಮುದಾಯದವರು ಇತ್ತೀಚೆಗೆ ಸಕಾರಾತ್ಮಕವಾಗಿಯೇ ಬಳಸಿಕೊಳ್ಳುತ್ತಿದ್ದಾರೆ.

ಸರ್ಕಾರದವರು ಕಾಡಿನಿಂದ ಹೊರಬಂದ ಜನರಿಗೆ ಇರಲು ಸ್ಥಳ, ವಾಸಕ್ಕೆ ಮನೆ, ಪ್ರಾಣಿ ಸಾಕಾಣಿಕೆ ಸೌಲಭ್ಯ, ವಿದ್ಯುತ್ ವ್ಯವಸ್ಥೆ, ಕುಡಿಯುವ ನೀರು, ರಸ್ತೆ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದಾರೆ. ಸ್ವಯಂ ಸೇವಾ ಸಂಸ್ಥೆಗಳು ಇವರಿಗಿರುವ ಸವಲತ್ತುಗಳ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ಉದಾಹರಣೆಗೆ ಮೈಸೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿಸರ್ಕಾರದವರು ಕುಡಿಯುವ ನೀರು ಸರಬರಾಜು ಮಾಡಲು ಬೋರ್‌ವೆಲ್‌ಗಳನ್ನು, ನೀರಿನ ತೊಂಬೆಗಳನ್ನು ನಿರ್ಮಿಸಿದ್ದಾರೆ.ಜೇನುಕುರುಬರು ಹಿಂದೆ ತಾವು ವಾಸಮಾಡುವ ಮನೆಯನ್ನು ಕಾಡಿನಿಂದ ಬಿದಿರಿನ ಅಚ್ಚೆಗಳನ್ನು ತಂದು ನಿರ್ಮಿಸಿಕೊಳ್ಳುತ್ತಿದ್ದರು. ಕಾಡು ಪ್ರಾಣಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವ ಸಲುವಾಗಿ ಪ್ರವೇಶದ್ವಾರವನ್ನು ಚಿಕ್ಕದಾಗಿ ನಿರ್ಮಿಸಿಕೊಳ್ಳುತ್ತಿದ್ದರು. ಮನೆಯ ಒಳಭಾಗದಲ್ಲಿ ತಲೆಕಡೆ, ಕಾಲ್ಕಡೆ, ಮಲಗುವ ಕೋಣೆ, ಅಡಿಗೆಮನೆ, ಕಂಬ,ಹೊರಭಾಗ ಪಡಸಾಲೆ, ಸ್ನಾನದ ಮನೆ ಮುಂತಾದ ವಿಭಾಗಗಳನ್ನು ಒಂದೇ ಗುಡಿಸಿಲಿನಲ್ಲಿ ಕಾಣಬಹುದಿತ್ತು. ಆದರೆ ಬದಲಾದ ಸಮಯದಲ್ಲಿ ಇಂದು ಜೇನುಕುರುಬ ಸಮುದಾಯದವರಲ್ಲಿ ಈ ರೀತಿಯಾದ ವಾಸದ ಮನೆಯನ್ನು ಕಾಣಬಹುದಾದರೂ ಅವುಗಳ ಸಂಖ್ಯೆ ಗಣನೀಯವಾಗಿ ಕ್ಷೀಣಿಸಿದೆ. ಇಂದು ಜೇನುಕುರುಬ ಸಮುದಾಯದವರಿಗೆ ಸರ್ಕಾರ ನೀಡಿರುವ ಸವಲತ್ತುಗಳನ್ನು ಬಳಸಿಕೊಂಡು ಹೆಂಚಿನಮನೆ, ಶೀಟ್‌ಮನೆ, ಆರ್.ಸಿ.ಸಿ ಮನೆಗಳಲ್ಲಿ ವಾಸಮಾಡುತ್ತಿರುವುದನ್ನು ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ, ಹುಣಸೂರು, ಪಿರಿಯಾಪಟ್ಟಣ, ನಂಜನಗೂಡು ತಾಲ್ಲೂಕುಗಳನ್ನು ಒಳಗೊಂಡಂತೆ ಕೆಲವು ಹಾಡಿಗಳಲ್ಲಿ ಕಾಣಬಹುದು.

**ಶೌಚಾಲಯ ವ್ಯವಸ್ಥೆ**

ಹಿಂದೆ ಜೇನುಕುರುಬರ ಹಾಡಿಗಳಲ್ಲಿ ನಾವು ಶೌಚಾಲಯಗಳ ವ್ಯವಸ್ಥೆ ಕಾಣಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಇಂದು ಇವರ ಹಾಡಿಗಳಲ್ಲಿ ಸರ್ಕಾರ ಮತ್ತು ಸ್ವಯಂ ಸೇವಾ ಸಂಘಗಳ ಪ್ರಯತ್ನದಿಂದ ಶೌಚಾಲಯಗಳ ವ್ಯವಸ್ಥೆಗಳು ರೂಪುಗೊಂಡಿವೆ. ನಮ್ಮ ಸುತ್ತಮುತ್ತಲಿನ ಹೆಸರಾಂತ ವಿವಿಧ ಸಂಘ ಸಂಸ್ಥೆಗಳು ಜನರ ಆರೋಗ್ಯ, ನೈರ್ಮಲ್ಯಗಳ ಬಗ್ಗೆ ಅರಿವುಮೂಡಿಸಿಕೊಡುವುದರ ಜೊತೆಗೆ ಉಚಿತವಾಗಿ ಶೌಚಾಲಯ ನಿರ್ಮಿಸಿಕೊಟ್ಟು ಅದರ ಬಳಕೆ ಮತ್ತು ನಿರ್ವಹಣೆ ಕುರಿತು ಬೀದಿನಾಟಕ, ಜಾಗೃತಿ ಗೀತೆಗಳು, ಸರಳ ನಾಟಕಗಳ ಮುಖಾಂತರ ಇವರಿಗೆ ಜಾಗೃತಿ ಮೂಡಿಸಿದ್ದಾರೆ.

ಹಿಂದೆ ಇವರಿಗೆ ಯಾವುದೇ ರೀತಿಯ ಗುರುತಿನ ಚೀಟಿಯ ಅರಿವಿರಲಿಲ್ಲ. ಇಂದು ಗುರುತಿನ ಚೀಟಿಯ ಅರಿವಿನಜೊತೆ ಮತದಾನದ ಅರಿವಿರುವುದು ಗಮನಾರ್ಹ. ಜೇನುಕುರುಬರಿಗೆ ಇರುವ ಹಕ್ಕು ಸವಲತ್ತುಗಳ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಅವುಗಳನ್ನು ದೊರಕಿಸಿಕೊಡುವ ಪ್ರಯತ್ನವನ್ನು ವಿವಿಧ ಸಂಘ ಸಂಸ್ಥೆಗಳು ಮಾಡುತ್ತಿದ್ದಾರೆ. ಇಂತಹ ಸ್ವಯಂ ಸೇವಾಸಂಸ್ಥೆಗಳ ಪಾತ್ರದಿಂದ ಇಂದು 80%(ಶೇಕಡಾ ಎಂಬತ್ತು)ರಷ್ಟು ಹಾಡಿಗಳಲ್ಲಿನ ಜೇನುಕುರುಬರು ರೇಷನ್ ಕಾರ್ಡ, ಆಧಾರ್ ಕಾರ್ಡ, ಮತದಾನದ ಗುರುತಿನ ಚೀಟಿಗಳನ್ನು ಹೊಂದಿರುವುದರ ಜೊತೆಗೆ ಅವುಗಳ ಸೌಲಭ್ಯವನ್ನು ಪಡೆಯುತ್ತಿದ್ದಾರೆ.ಸಮಾಜ ಕಲ್ಯಾಣ ಇಲಾಖೆಯ ಮೂಲಕ ವರ್ಷಕ್ಕೆ ಕುಟುಂಬದ ಎರಡರಿಂದ ಮೂರು ಜನ ಸದಸ್ಯರಿಗೆ ತಲಾ ಒಂದು ಕುರಿಗಳನ್ನು ಅಥವಾ ಬೇಸಾಯಕ್ಕೆ ಎತ್ತುಗಳನ್ನು ವಿತರಿಸುತ್ತಿದ್ದಾರೆ. ಇದರಂತೆಯೇ ಊಇಖಖ ಪ್ರತಿಭಾ ಸಂಸ್ಥೆಯು ಹಿಂದೆ ಕಾಡಿನ ಉತ್ಪನ್ನಗಳನ್ನು ಮಾರಿ ಜೀವನ ನಡೆಸುತ್ತಿದ್ದ ಜೇನುಕುರುಬರಿಗೆ ಪ್ರತಿ ಕುಟುಂಬಕ್ಕೆ ಒಂದು ಕೋಳಿ, ಒಂದು ಕುರಿ ಹಾಗೂ ಸಬ್ಸಿಡಿ ಸಾಲವನ್ನು ನೀಡಿದ್ದಾರೆ ಎಂಬುದು ಮಾಹಿತಿಯಿಂದ ತಿಳಿದುಬರುತ್ತದೆ.

**ಜೇನುಕುರುಬರ ವೈದ್ಯಕೀಯ ಪದ್ಧತಿಯಲ್ಲಿನ ಬದಲಾವಣೆಗಳು**

ಕಾಡಿನಿಂದ ಹೊರಬಂದ ಜೇನುಕುರುಬರ ಆರೋಗ್ಯ ಸುಧಾರಣೆ ಮತ್ತು ಸಮಸ್ಯೆ ನಿವಾರಣೆಗಾಗಿ ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದಲ್ಲಿ ಕಾಡಂಚಿನ ಪ್ರದೇಶಗಳಿಗೆ ಆರೋಗ್ಯ ಸಂಚಾರ ಘಟಕವು(ಒಔಃಖಚಿಇ ಗಿಂಓ) ಪ್ರತಿ ಸೋಮವಾರ ಜೇನುಕುರುಬರ ಹಾಡಿಗಳಿಗೆ ಭೇಟಿ ನೀಡಿ ಜನರ ಪ್ರಾಥಮಿಕ ಕಾಯಿಲೆಗಳಿಗೆ ಉಚಿತ ಚಿಕಿತ್ಸೆಯನ್ನು ನೀಡುತ್ತದೆ. ಇವರು ಹಾಡಿಯ ಜನರ ಆರೋಗ್ಯ ಸ್ವಚ್ಚತೆಯ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಾರೆ. ಹಿಂದೆ ಜೇನುಕುರುಬ ಸಮುದಾಯದವರು ಆಸ್ಪತ್ರೆಗೆ ಬಾರದೆ, ಪೂರ್ವಜರ ಮಾರ್ಗದರ್ಶನದಲ್ಲಿ ಗಿಡಮೂಲಿಕೆಗಳನ್ನೇ ಔಷಧಿಯಾಗಿ ಬಳಸಿ ತಮ್ಮ ಕಾಯಿಲೆಗಳನ್ನು ಗುಣಪಡಿಸಿಕೊಳ್ಳುತ್ತಿದ್ದರು. ಆದರೆ ಇಂದು ಇವರು ಅಲೋಪತಿ ಚಿಕಿತ್ಸೆಗೆ ಹೊಂದಿಕೊಂಡಿರುವುದು ಇವರಲ್ಲಿ ಆಗಿರುವ ಆರೋಗ್ಯ

ನಿರ್ವಹಣೆಯ ಬದಲಾವಣೆಯನ್ನು ಸೂಚಿಸುತ್ತದೆ. ಅಂತೆಯೇ ಇವರ ಆರೋಗ್ಯ ಸುಧಾರಣೆಗಾಗಿ ಸರ್ಕಾರ, ಯೋಜನಾ ಸಮನ್ವಯಾಧಿಕಾರಿಗಳು ಪೌಷ್ಠಿಕ ಆಹಾರ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ. ಈ ಯೋಜನೆಯ ಪ್ರಕಾರ ವರ್ಷಕ್ಕೆ ಆರು ತಿಂಗಳಲ್ಲಿ ಪ್ರತಿ ತಿಂಗಳು 30(ಮೂವತ್ತು) ಮೊಟ್ಟೆ, 1(ಒಂದು)ಕೆಜಿ ರಾಗಿ, 2(ಎರಡು)ಕೆಜಿ ಬೆಲ್ಲ, ಬೇಳೆ, ಹೆಸರುಕಾಳು ಹಾಗೂ ಬಾಣಂತಿಯರಿಗೆ ಮತ್ತು ಶಿಶುವಿನ ಪೋಷಣೆಗೆ ಅಗತ್ಯ ವಸ್ತುಗಳನ್ನು ವಿತರಿಸಲಾಗುತ್ತಿದೆ.

**ಜೇನುಕುರುಬ ಸಮುದಾಯಗಳಲ್ಲಿ ಸಾರಿಗೆ ವ್ಯವಸ್ಥೆ**

ಸಂಚಾರವ್ಯವಸ್ಥೆಗೆ ಸಂಬಂಧಿಸಿದಂತೆ ಹೇಳುವುದಾದರೆ ಹಿಂದೆ ಅರಣ್ಯವಾಸಿಗಳಾದ್ದರಿಂದ ಇವರಿಗೆ ಯಾವುದೇ ರೀತಿಯ ಸಾರಿಗೆ ಸೌಲಭ್ಯವಿರಲಿಲ್ಲ. ಇಂದು ಕೂಡ ಕೆಲವು ಹಾಡಿಯ ಒಳಗೆ ಬಸ್ಸು, ಕಾರು, ಟೆಂಪೋಗಳು ಹೋಗಲು ಸಾಧ್ಯವಾಗುವುದಿಲ್ಲ. ಇಂತಹ ಹಾಡಿಗಳಿಗೆ ಯಾರಾದರೂ ಭೇಟಿ ನೀಡಿದರೂ ದ್ವಿಚಕ್ರವಾಹನದಲ್ಲಿಯೇ ಅಥವಾ ಕಾಲುನಡಿಗೆಯಲ್ಲಿಯೇ ಸಂಚರಿಸಬೇಕಾಗುತ್ತದೆ. ಅಲ್ಲದೆ ವ್ಯವಸ್ಥಿತವಾದ ರಸ್ತೆಗಳು ಇಲ್ಲದಿರುವ ರಸ್ತೆಗಳು ಕಿರಿದಾಗಿದ್ದು (ಕಾಲುದಾರಿ) ಅದೇ ದಾರಿಯಲ್ಲಿ ಸಂಚರಿಸುವಂತಹ ಸನ್ನಿವೇಶವಿದೆ. ಹೀಗಿದ್ದರೂ ಇಂದಿನ ಆಧುನಿಕತೆಯ ಪರಿಣಾಮ, ಸರ್ಕಾರದವರ ಪರಿಶ್ರಮದಿಂದ ಮೈಸೂರು ಜಿಲ್ಲೆಯ ಹಲವಾರು ಹಾಡಿಗಳಲ್ಲಿನ ರಸ್ತೆಗಳು ಕಾಂಕ್ರೀಟ್ ಹಾಗೂ ಡಾಂಬರೀಕರಣಗೊಂಡಿರುವುದನ್ನು ನಾವು ಕಾಣಬಹುದು. ಕನಿಷ್ಟ ಒಂದು ಅಥವಾ ಎರಡು ಕಿಲೋಮೀಟರ್‌ಗಳ ಅಂತರದಲ್ಲಿ ಸಾರಿಗೆ ಸೌಲಭ್ಯಗಳನ್ನು ಜೇನುಕುರುಬ ಹಾಡಿಗಳು ಒಳಗೊಂಡಿವೆ. ಆದರೆ ರಸ್ತೆ ಕೊರತೆ, ಅರಣ್ಯನೀತಿಗಳಿಂದ ಹಾಡಿಗೆ ಸಾರಿಗೆ ಸೌಲಭ್ಯವಿಲ್ಲದಿರುವುದು ಶೋಚನೀಯ ಸಂಗತಿ. ಕಾಡಂಚಿನಲ್ಲಿ ವಾಸಮಾಡುವ ಇವರಿಗೆ ಕ್ರೂರ ಪ್ರಾಣಿಗಳ ಹಾವಳಿ ಇರುವುದರಿಂದ ಬೆಳಗಿನಜಾವ, ಮುಸ್ಸಂಜೆ, ರಾತ್ರಿಯವೇಳೆ ಇವರು ಸುಗಮವಾಗಿ ಸಂಚರಿಸಲು ಮತ್ತು ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಸೂಕ್ತಸಾರಿಗೆ ಸೌಲಭ್ಯ ಅವಶ್ಯಕವಾಗಿದೆ.

**ಜೇನುಕುರುಬಸಮುದಾಯಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ**

ಜೇನುಕುರುಬ ಸಮುದಾಯದವರು ಹಿಂದೆ ಕಾಡಿನಲ್ಲಿ ಹರಿಯುವ ನೀರನ್ನೇ ಅಥವಾ ಗುಂಡಿಯಲ್ಲಿ ನಿಂತಿದ್ದ ನೀರನ್ನೇ ಸೋಸಿ ಕುಡಿಯುತ್ತಿದ್ದರು ಹಾಗೂ ಇನ್ನಿತರ ದೈನಂದಿನ ಕೆಲಸ ಕಾರ್ಯಗಳಿಗೆ ಅದೇ ನೀರನ್ನು ಬಳಸುತ್ತಿದ್ದರು. ಇಂದು ಜೇನುಕುರುಬರ ಹಾಡಿಯಲ್ಲಿ ವಾಟರ್‌ಟ್ಯಾಂಕ್‌ಗಳು, ಬೋರ್‌ವೆಲ್‌ಗಳು, ಶುದ್ಧೀಕರಿಸುವ ನೀರಿನ ಯಂತ್ರಗಳನ್ನು ಕಾಣಬಹುದಾಗಿದೆ. ಇವುಗಳಲ್ಲಿ ಟ್ಯಾಂಕ್‌ಗಳು, ಬೋರ್‌ವೆಲ್‌ಗಳು ಸರ್ಕಾರದವರು ನೀಡಿರುವುದಾಗಿದೆ. ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೋಕಿನ ಕೆಲವು ಹಾಡಿಗಳಲ್ಲಿ ಕುಡಿಯಲು ಶುಚಿಕರವಾದ ನೀರು 'ಶುದ್ಧೀಕರಿಸುವ ಯಂತ್ರ'ವನ್ನು ಸಂಘ ಸಂಸ್ಥೆಗಳ ಸಹಯೋಗದಲ್ಲಿ ಹಲವಾರು ನೀರಿನ ಶುದ್ಧಿಕರಣದ ಟ್ಯಾಂಕ್‌ಗಳನ್ನು(ಪ್ರತಿ ಮನೆಗೂ)ಉಚಿತವಾಗಿ ನೀಡಿರುತ್ತಾರೆ. ಶುದ್ಧೀಕರಿಸಿದ ನೀರನ್ನು ಕೇವಲ ಮುಖ್ಯವಾಹಿನಿ ಸಮುದಾಯದವರು ಮಾತ್ರ ಬಳಸದೆ ಜೇನುಕುರುಬ ಸಮುದಾಯದವರು ಬಳಸುತ್ತಾರೆ. ಈ ನೀರಿನ ಶುದ್ಧೀಕರಣದ ಟ್ಯಾಂಕ್‌ನಿಂದ ಬರುವನೀರು ಕುಡಿಯಲು ತಂಪಾಗಿರುವುದಲ್ಲದೆ ಶುದ್ಧವಾಗಿಯೂ ಇರುತ್ತದೆ.

**ಜೇನುಕುರುಬಸಮುದಾಯಗಳಲ್ಲಿ ವೈವಾಹಿಕ ಪದ್ಧತಿಯಲ್ಲಿನ ಬದಲಾವಣೆಗಳು**

ವಿವಾಹಕ್ಕೆ ಸಂಬಂಧಿಸಿದಂತೆ ಹಿಂದೆ ಹಲವಾರು ಕಟ್ಟುಪಾಡುಗಳನ್ನು ಕಾಣಬಹುದಾಗಿತ್ತು. ಅದರಲ್ಲೂ ಒಳಗಿನವರು, ಹೊರಗಿನವರು, ಒಳಪಂಗಡ ವಿವಾಹ, ಹೊರಪಂಗಡ ವಿವಾಹ ಮುಂತಾದ ಹಲವು ವಿಧಾನಗಳನ್ನು ಕಾಣಬಹುದಾಗಿತ್ತು. ಆದರೆ ಇಂದು ಇವರ ಸಮುದಾಯದವರು ಬಹುಪತ್ನಿತ್ವ, ಕೂಡಾವಳಿ, ವಿಧವಾ ವಿವಾಹ, ಪ್ರೇಮವಿವಾಹಗಳನ್ನು ಒಪ್ಪಿಕೊಂಡು ಜೀವನ ನಡೆಸುತ್ತಿರುವುದು ಗಮನಾರ್ಹಸಂಗತಿಯಾಗಿದೆ. ಇಂದಿಗೂ ಸಹ ಸಮೂಹ ಮಾಧ್ಯಮದಲ್ಲಿ ಅಂರ್ತಜಾತಿ ವಿವಾಹ, ಪ್ರೇಮ ವಿವಾಹ ಮತ್ತು ಇನ್ನಿತರ ವಿವಾಹ ವಿಚಾರದಲ್ಲಿ ತಮ್ಮ ಪ್ರತಿಷ್ಠೆಯನ್ನು ಪರಿಗಣಿಸುವ ಹಲವು ಪ್ರಕರಣಗಳು ಬಿತ್ತರಗೊಳ್ಳುತ್ತಿವೆ. ಇವುಗಳ ನಡುವೆ ಈ ಪರಿಯ ಮನೋಭಾವ ಹೊಂದಿರುವ ಜೇನುಕುರುಬ ಸಮುದಾಯದ ವರ್ತನೆ ಮುಖ್ಯವಾಹಿನಿ ಸಮುದಾಯದ ವರ್ತನೆಗೆ ಮಾದರಿಯಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ ಕೆಲವು ಹಾಡಿಗಳಲ್ಲಿ ಅಂತರ್‌ಜಾತಿ ವಿವಾಹವನ್ನು ಒಪ್ಪದೇ ಇರುವುದು, ಈ ಬಗೆಯ ವಿವಾಹವಾದವರನ್ನು ಮನೆಗೆ ಸೇರಿಸದೇ ಇರುವುದು ಕಂಡುಬರುತ್ತದೆ. ಮೈಸೂರು ಜಿಲ್ಲೆಯ ಜೇನುಕುರುಬರ ವಿವಾಹ ಆಚರಣೆಗಳಲ್ಲಿ ಬದಲಾವಣೆ ಕಂಡುಬಂದಿದ್ದರೂ ಸಹ ಅವರವರ ಪ್ರಾದೇಶಿಕತೆಗೆ ಪೂರಕವಾಗಿ ವೈವಾಹಿಕ ಪದ್ಧತಿಯಲ್ಲಿವಿವಿದತೆ ಕಂಡುಬರುತ್ತದೆ ಮತ್ತು ಇದು ಜಾತಿ ಚೌಕಟ್ಟನ್ನು ಮೀರಿಲ್ಲ.ವಿವಾಹ ಆಚರಣೆಗೆ ಸಂಬಂಧಿಸಿದಂತೆ ಹಿಂದೆ ಜೇನುಕುರುಬರು ಹುಡುಗಿ ಋತುಮತಿಯಾದ ಎರಡು ತಿಂಗಳಲ್ಲಿ ಗಂಡು ಹುಡುಕಿ ವಿವಾಹ ನೆರವೇರಿಸುತ್ತಿದ್ದರು. ಸಾಂಪ್ರದಾಯಿಕ ವಿವಾಹಗಳು ಹಿಂದಿನಂತೆ ಇಂದು ಕಂಡುಬಂದರೂ ವಿವಾಹದ ವಯಸ್ಸು, ಆಚರಣೆ, ಶಾಸ್ತ್ರ ಮುಂತಾದವುಗಳಲ್ಲಿ ಹಲವಾರು ಬದಲಾವಣೆಗಳನ್ನು ಕಾಣಬಹುದಾಗಿದೆ.

ಹಿಂದೆ ಒಂದು ಸೀರೆ, ರವಿಕೆ, ಮಣಿಸರ ಅಷ್ಟೇ, ಮದುವೆ ಮುಗಿದು ಹೋಗುತ್ತಿತ್ತು. ಇಂದು ಅದು ಬೇಕು, ಇದು ಬೇಕು ಅಂತಾರೆ ಅವತ್ತು ಅದೆಲ್ಲಾ ಇರಲಿಲ್ಲ. ಅಂದು ಉಡುಗೊರೆ ಏನು ಕೊಡುತ್ತಿರಲ್ಲಿಲ್ಲ ಆದರೆ ಇಂದು ಉಡುಗೊರೆ ಕೊಡುತ್ತಾರೆ. ಹಿಂದೆ ಹಾಡಿಗಳಲ್ಲಿ ಮನೆ ಮುಂದೆ ಮದುವೆ ನಡೆಯುತ್ತಿತ್ತು. ಆದರೆ ಇಂದು ಕೆಲವು ಮದುವೆಗಳು ಕಲ್ಯಾಣ ಮಂದಿರಗಳಲ್ಲಿ ನಡೆಯುತ್ತದೆ'

ಹಿಂದೆ ಮದುವೆ ಕಾರ್ಯ ನಡೆಸುವಾಗ ನಮ್ಮ ರಕ್ತಸಂಬಂಧಿಗಳು, ಪಂಗಡದವರನ್ನು ಮಾತ್ರ ಆಹ್ವಾನಿಸಲಾಗುತ್ತಿತ್ತು. ಆದರೆ ಇಂದು ಪ್ರಭಾವಿ ವ್ಯಕ್ತಿಗಳನ್ನು ಆಹ್ವಾನಿಸಿ ಜೋರಾಗಿ ಮದುವೆ ಮಾಡುತ್ತಾರೆ. ಇಂದು ಗಂಡು ಹೆತ್ತವರು ಹೆಣ್ಣಿನ ಮನೆಗೆ ಹೋಗಿ ಹೆಣ್ಣು ಕೇಳುತ್ತಾರೆ. ಹಿಂದೆ ಮೇಟಿಯ ಮುಂದಾಳತ್ವದಲ್ಲಿ ಶಾಸ್ತ್ರಗಳನ್ನು ಮಾಡಿ ಹಲವು ಒಪ್ಪಂದಗಳನ್ನು ಮಾಡಿಕೊಂಡು ಲಗ್ನ ಮಾಡಿಕೊಡಲಾಗುತ್ತಿತ್ತು. ಈಗ ಮೇಟಿಯ ಪಾತ್ರ ಗೌಣವಾಗಿದೆ. ಹಿಂದೆ ಹುಡುಗಿಗೆ ಚಿಕ್ಕವಯಸ್ಸಿನಲ್ಲೇ ಮದುವೆ ಮಾಡಲಾಗುತ್ತಿತ್ತು. ಆದರೆ ಇಂದು ಸರ್ಕಾರದ ನಿಯಮಾನುಸಾರ ಹೆಣ್ಣುಮಗಳಿಗೆ 18(ಹದಿನೆಂಟು) ವರ್ಷ ತುಂಬಿದ ಅನಂತರ ಮದುವೆ ಮಾಡುತ್ತಾರೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

**ಜೇನುಕುರು ಸಮುದಾಯದ ಆಹಾರ ಕ್ರಮದಲ್ಲಾದ ಬಲಾವಣೆಗಳು**

ಜೇನುಕುರುಬರ ಆಹಾರಕ್ರಮದಲ್ಲಿಹಲವಾರು ಬದಲಾವಣೆಗಳಾಗಿದೆ. ಹಿಂದೆ ಇವರು ಅರಣ್ಯದ ಉತ್ಪನ್ನಗಳನ್ನೇ ತಮ್ಮ ದಿನನಿತ್ಯದ ಆಹಾರವಾಗಿ ಬಳಸುತ್ತಿದ್ದರು. ರಾಗಿ, ಪೂಳೆ, ಗೆಡ್ಡೆ ಗೆಣಸು, ಬಿದಿರುಅಕ್ಕಿ, ಸೀಗೆಸೊಪ್ಪು, ಅಣ್ಣೆಸೊಪ್ಪು, ಗಿರಿಜೆಸೊಪ್ಪು, ಜವನದಸೊಪ್ಪು, ಕಾಡುಕೋಳಿ, ಜಿಂಕೆ, ಮೇಕೆ, ಕಾಡಿನ ಉತ್ಪನ್ನಗಳು,ಗದ್ದೆಗಳಲ್ಲಿ ಭತ್ತ ಕಟಾವು ಮಾಡಿದಾಗ ಇಲಿಗಳು ಬಿಲಗಳಲ್ಲಿ ಭತ್ತವನು ಶೇಖರಿಸಿಕೊಂಡಿರುತ್ತವೆ. ಬುಡಕಟ್ಟು ಜನರು ಭೇಟೆಯ ಮೂಲಕ ಅವುಗಳನ್ನು ಅಗೆದು ಹಿಡಿದು ಬಿಲದಲ್ಲಿ ಶೇಖರೊಸಿದ ಭತ್ತವನ್ನು ಮತ್ತು ಇಲಿಗಳನ್ನು ಇಡಿದು ತಿನ್ನುವ ಪದ್ದತಿ, ಹೀಗೆ ಮುಂತಾದವುಗಳನ್ನು ಆಹಾರಕ್ರಮವಾಗಿ ಬಳಸುತ್ತಿದ್ದರು. ಪ್ರಸ್ತುತ ಇವರನ್ನು ಕಾಡಿನಿಂದ ಹೊರಬಂದ ಕಾರಣ ಈ ಬಗೆಯ ಆಹಾರಕ್ರಮಗಳು ಕಾಣಲಾಗುವುದಿಲ್ಲ.

ಹಿಂದೆ ಹಬ್ಬದ ದಿನದಂದು ಗೆಡ್ಡೆ ಗೆಣಸು, ಸೊಪ್ಪು,ಜೇನು, ಮಾಂಸ, ಇತ್ಯಾದಿಗಳನ್ನು ಉಪಯೋಗಿಸುತ್ತಿದ್ದರು ಆದರೆ, ಇಂದು ಹಬ್ಬದದಿನ ಒಬ್ಬಟ್ಟು, ಪಾಯಸ, ಪಲ್ಯ, ವಿವಿಧ ಬಗೆಯ ಭೋಜನಗಳನ್ನು ಸಿದ್ಧಪಡಿಸಿ ವಿಜೃಂಭಣೆಯಿಂದ ಹಬ್ಬಗಳನ್ನು ಆಚರಣೆ ಮಾಡುತ್ತಾರೆ. ಇದೂ ಸಹ ಆಧಿನಿಕ ಸಾಮಾಜಿಕ ಬದಲಾವಣೆಯಿಂದ ಬಂದ ಬಳುವಳಿಯಾಘಿದೆ. ಸರಳ ಮತ್ತು ಪೌಷ್ಠಿಕ ಆಹಾರ ಇಂದು ಆಧುನಿಕ ರೂಪವನ್ನು ಪಡೆದುಕೊಂಡಿದೆ. ಅಕ್ಕಿ, ಗೋಧಿ, ಕಾಳುಗಳು ಮುಂತಾದ ದಾನ್ಯಗಳು ಇಂದು ಇವರ ಪ್ರತ್ಯೇಕ

ಅಡಿಗೆಕೋಣೆಯನ್ನು ಪ್ರವೇಶಿಸಿವೆ. ಅತಿಥಿಗಳಿಗೆ ವಿಶೇಷ ಅಡುಗೆಯನ್ನು ತಯಾರಿಸುವುದು ಹಾಗೂ ಮಾಂಸಕ್ಕಾಗಿ ಕೋಳಿ ಮತ್ತು ಆಡುಗಳನ್ನು ಸಾಕುವುದು ಸಾಮಾನ್ಯವಾಗಿದೆ. ಕೇವಲ ಎರಡು ಹೊತ್ತಿನ ಊಟದ ಪದ್ಧತಿ ಅನುಸರಿಸುತ್ತಿದ್ದ ಇವರು ಇಂದು ಇತರ ಸಮುದಾಯಗಳಂತೆ ಕೆಲವರು ಕಾಲಮಾನದ ಊಟದ ಪದ್ಧತಿಗೆ ವರ್ಗಾವಣೆಯಾಗಿದ್ದಾರೆ. ಹಾಗೂ ಸರ್ಕಾರವೇ ಇವರಿಗೆ ಆಹಾರ ಸಾಮಾಗ್ರಿಗಳನ್ನು ಸರಬರಾಜು ಮಾಡುತ್ತಿರುವುದು ಸಹ ಇವರ ಸಾಂಪ್ರದಾಯಿಕ ಆಹಾರಕ್ರಮದ ಮೇಲೆ ಪ್ರಭಾವ ಬೀರಿದೆ.

**ಜೇನುಕುರುಬ ಮಹಿಳೆಯರ ಜೀವನ ಸ್ಥಿತಿಯಲ್ಲಿನ ಬದಲಾವಣೆಗಳು**

ಜೇನುಕುರುಬ ಮಹಿಳೆ ಇಂದಿಗೂ ತನ್ನ ಸಾಂಪ್ರದಾಯಿಕ ಸ್ಥಾನಮಾನಗಳಲ್ಲಿ ಗುರುತಿಸುವಂತಹ ಬದಲಾವಣೆ ಕಂಡಿಲ್ಲ. ಆಕೆ ಅತ್ಯಂತ ನಾಚಿಕೆಯ ಸ್ವಭಾವದವಳಾಗಿದ್ದು ಕೇವಲ ಮನೆಗೆಲಸ ಮತ್ತು ದುಡಿಮೆಗೆ ಮೀಸಲಾಗಿದ್ದಾಳೆ. ಅಂತೆಯೇ ಕೌಟುಂಬಿಕ, ಲಿಂಗ ತಾರತಮ್ಯ ಮತ್ತು ಹಿಂಸೆಗೆ ಒಳಗಾಗಿರುವುದನ್ನು ಇಂದು ಕಾಣಬಹುದು. ಇವುಗಳನ್ನು ಗಮನಿಸಿದಾಗ ಆಕೆಗೆ ಪ್ರತ್ಯೇಕ ಅಸ್ತಿತ್ವವಿದೆ ಎನಿಸುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಸ್ವಯಂ ಸೇವಾ ಸಂಘ ಸಂಸ್ಥೆಗಳು ಮಹಿಳೆಯರಲ್ಲಿ ಜಾಗೃತಿ ಹಾಗೂ ಸ್ವಾವಲಂಬನೆ ಮೂಡಿಸಲು ಕುಟುಂಬ ಸಂಘಗಳು ಹಾಗೂ ಸ್ವ–ಸಹಾಯ ಸಂಘಗಳ ಮೂಲಕ ಪ್ರಯತ್ನಿಸುತ್ತಿವೆ. ಇದು ಸಣ್ಣ ಉಳಿತಾಯ ಯೋಜನೆಗೂ ಪ್ರೇರಣೆಯಾಗಿದೆ. ಈ ಪ್ರಯತ್ನದಿಂದಾಗಿ ಆದಿವಾಸಿ ಮಹಿಳೆಯರು ಒಂದೆಡೆ ಸೇರುವುದು, ಹತ್ತಿರದ ಬ್ಯಾಂಕ್ ಮುಂತಾದ ಕಛೇರಿಗಳಿಗೆ ಹೋಗುವುದು ಸಾಧ್ಯವಾಗಿದೆ. ಇದರಲ್ಲಿ ಮುಖ್ಯವಾಗಿ ನೋಡುವುದಾದರೆ, ಸಾಮಾನ್ಯ ಬುಡಕಟ್ಟು ಮಹಿಳೆ ಜಾಜಿ ತಿಮ್ಮಯ್ಯ ಎಂಬ ಮಹಿಳೆ, ಮೈಸೂರು ಜಿಲ್ಲಾ ಪಂಚಾಯಿತಿಯಲ್ಲಿ ಸದಸ್ಯರು ಹಾಗೂ ಉಪಾಧ್ಯಕ್ಷರಾಗಿದ್ದನ್ನು ಇಲ್ಲಿ ಉಲ್ಲೇಖಿಸಬಹುದು.

**ಜೇನುಕುರುಬ ಸಮುದಾಯದ ಸಾಂಸ್ಕೃತಿಕ ಬದಲಾವಣೆಗಳು**

ಸಮಾಜ ಮತ್ತು ಸಂಸ್ಕೃತಿಯ ನಡುವೆ ಅವಿನಾಭಾವ ಸಂಬಂಧವಿದ್ದು ಸಂಸ್ಕೃತಿಯು ಸಮಾಜವನ್ನು ನಿಯಂತ್ರಿಸುತ್ತದೆ. ಮಾನವನ ಬೇಕು–ಬೇಡಗಳು, ಆಚಾರ–ವಿಚಾರಗಳು, ಉಡುಗೆ–ತೊಡುಗೆಗಳು ಆತನ ಸಂಸ್ಕೃತಿಯ ಪ್ರತೀಕವಾಗಿದೆ. ಭಾರತೀಯ ಸಂಸ್ಕೃತಿಯ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ಆಕ್ರಮಣ ಮಾಡಿದ ಪರಿಣಾಮವಾಗಿ ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ, ನೈತಿಕ ಜೀವನದಲ್ಲಿ ಅನೇಕ ಬದಲಾವಣೆಗಳು ಉಂಟಾದವು.ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪ್ರಮುಖ ಕೊಡುಗೆಯಾಗಿ ಆಧುನೀಕರಣ ಮತ್ತು ಶಿಕ್ಷಣ ನಾಗರಿಕ ಬದುಕಿಗೆ ಹೊಸ ಆಯಾಮವನ್ನು ನೀಡಿತು. ಇದೆಲ್ಲದರ ಪರಿಣಾಮವಾಗಿ ಪರಂಪರಾಗನುಗತ ಮೌಲ್ಯಗಳು ಸಂಪ್ರದಾಯಗಳು, ಆಚರಣೆಗಳಲ್ಲಿನ ಬದಲಾವಣೆ ಹೊಸಮನ್ವಂತರಕ್ಕೆ ದಾರಿ ಮಾಡಿಕೊಟ್ಟಿತು. ಈ ಅವಧಿಯಲ್ಲಿ ಸೇವಾ ಉದ್ದೇಶವನ್ನಿಟ್ಟುಕೊಂಡು ಭಾರತಕ್ಕೆ ಕಾಲಿರಿಸಿದ ಕ್ರೈಸ್ತ ಮಿಶಿನರಿಗಳು, ಆಧುನಿಕ ಸೌಲಭ್ಯಗಳಾದ ಶಾಲೆ, ಆಸ್ಪತ್ರೆ, ಆಹಾರ, ಬಟ್ಟೆ ಮುಂತಾದವುಗಳನ್ನು ನೀಡುವುದರ ಮೂಲಕ ಜೇನುಕುರುಬ, ಬುಡಕಟ್ಟು ಸಮುದಾಯಗಳು, ಗಿರಿಜನರಲ್ಲಿ ಹೊಸ ಚಿಂತನೆ ಮೂಡಿಸಲು ನೆರವಾದವು.

ಹಿಂದೆ ಬುಡಕಟ್ಟು ಸಮುದಾಯಗಳಲ್ಲಿ ದೇವರಗುಡ್ಡಪ್ಪನ ನೇತೃತ್ವದಲ್ಲಿ ದೂಪಹಾಕಿ, ಕಾಯಿಒಡೆದು, ಅರಿಶಿಣ ಕುಂಕುಮಗಳನ್ನು ಹಾಕಿ ಎಲ್ಲರೂ ಒಂದೆಡೆ ಸೇರಿ ಸಂಭ್ರಮದಿಂದ ಹಬ್ಬಗಳನ್ನು ಆಚರಣೆ ಮಾಡುತ್ತಿದ್ದರು. ಆದರೆ, ಇಂದು ಗುಡ್ಡಪ್ಪ ಎಂಬ ಸಂಸ್ಕೃತಿ ದಾರಿತಪ್ಪುತ್ತಿದೆ. ಹಣ ಇರುವವರು ಹೆಚ್ಚಿನ ಆಹಾರ ಪದಾರ್ಥಗಳನ್ನು ಸಿದ್ಧಪಡಿಕೊಂಡು ತಿಂದರೆ ಬಡವರು ಇರುವಷ್ಟರಲ್ಲೇ ಅಡಿಗೆ ಮಾಡಿ ಖುಷಿಪಡುತ್ತಾರೆ. ಈಗ ಎಲ್ಲರೂ ಒಂದೆಡೆ ಸೇರುವುದಿಲ್ಲ, ಅವರವರ ಮನೆಯಲ್ಲಿಹಬ್ಬಗಳ ಆಚರಣೆ ಮಾಡಲಾಗುತ್ತದೆ. ಇದು ನಮಗೆ ಸಂತಸ ತರುವುದಿಲ್ಲ' ಎಂದು ಇಂದಿನ ಆಚರಣೆ ಬಗ್ಗೆ ಮೈಸೂರು ಜಿಲ್ಲೆಯ ವಿವಿಧ ತಾಲ್ಲೂಕಿನ ಜೇನುಕುರುಬರು ವಿಷಾದ ವ್ಯಕ್ತಪಡಿಸುತ್ತಾರೆ.

ಅರಣ್ಯದಿಂದ ಹೊರಬಂದ ಜೇನುಕುರುಬರು ಆಧುನೀಕರಣದ ಪ್ರಭಾವದಿಂದ ಶಿಕ್ಷಣ, ವೃತ್ತಿ, ಉಡುಪು, ಭಾಷೆ, ಮುಖ್ಯವಾಹಿನಿ ಸಮುದಾಯದ ಪ್ರಭಾವದಿಂದ ಪ್ರಭಾವಿತರಾಗಿದ್ದಾರೆ. ಜೊತೆಗೆ ಇತ್ತೀಚಿನ ಯುವಕರ ಮನೋಭಾವಗಳಿಂದಾಗಿ ನಮ್ಮ ಸಂಸ್ಕೃತಿಯಲ್ಲಿ ತಲೆಮಾರುಗಳ ಅಂತರ ಸೃಷ್ಠಿಯಾಗಿ ಅಗಾಧವಾದ ಬದಲಾವಣೆಯಾಗಿದೆ ಎಂದು ಹೇಳುತ್ತಾರೆ.ಸರ್ಕಾರದ ಅರಣ್ಯಹಕ್ಕು ಕಾಯಿದೆಯಂತಹ ನೀತಿ–ನಿಯಮಗಳಿಂದ ನಮ್ಮ ಮೂಲ ಸಂಸ್ಕೃತಿಯು ನಶಿಸುತ್ತಿದೆ. ನಮ್ಮನ್ನು ಕಾಡಿನಿಂದ ಹೊರತಂದದ್ದು ದೇಹವನ್ನು ಜೀವದಿಂದ ಹೊರತಂದಂತಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಹಾಡಿಯಲ್ಲಿ ಸಹಬಾಳ್ವೆ ಇಲ್ಲದಿರುವುದು ಒಂದೆಡೆಯಾದರೆ ಮೇಟಿಯಾದ ವ್ಯಕ್ತಿ ತನ್ನ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸದೆ ತಾನೇ ತಪ್ಪುಗಳನ್ನು ಮಾಡುತ್ತಾ ಆ ಸ್ಥಾನಕ್ಕೆ ಕಳಂಕ ತಂದಿರುವುದು ಮತ್ತೊಂದೆಡೆ. ಮತ್ತೆ ಕೆಲವೆಡೆ ಹಾಡಿಗಳು ಸ್ಥಳಾಂತರ ಹೊಂದಿದ ಅನಂತರದಿಂದ ಮೇಟಿಯಾಗಿ ನಾವು ಯಾರನ್ನು ನೇಮಿಸಿಲ್ಲ, ನಮ್ಮಷ್ಟಕ್ಕೆ ನಾವು ಜೀವನ ನಡೆಸುತ್ತಿದ್ದೇವೆ ಎಂದುಕೆಲವರು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಜೇನುಕುರುಬರ ಹಾಡಿಯ ಹೆಸರು ಸಹ ಹಿಂದೆ ಅವರ ಸಂಸ್ಕೃತಿಯ ಪ್ರತೀಕವಾಗಿತ್ತು. ಆದರೆ ಇಂದು ಹಲವು ಹಾಡಿಗಳ ಹೆಸರು ಪರಿವರ್ತನೆ ಹೊಂದಿದೆ. ಇದಕ್ಕೆ ಕಾರಣ ಇವರು ಒಂದು ಕಡೆ ನೆಲೆಯೂರದಿರುವುದು ಒಂದೆಡೆಯಾದರೆ ಆಧುನಿಕರಣದ ಪ್ರಭಾವದಿಂದ ಇತರರು ಆ ಹಾಡಿಗೆ ಮತ್ತೊಂದು ಹೆಸರು ನಾಮಕರಣ ಮಾಡಿ ಅದೇ ಹೆಸರು ಶಾಶ್ವತವಾಗಿ ನೆಲೆಯೂರಿರುವ ಘಟನೆಗಳು ಇವೆ.

**ಜೇನುಕುರುಬರ ಮೇಲೆ ಆಧುನಿಕತೆಯ ಪರಿಣಾಮ**

ಆಧುನಿಕತೆ ಜೇನುಕುರುಬರ ಯುವಜನಾಂಗದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ಇದರ ಪ್ರಭಾವಕ್ಕೊಳಗಾದ ಯುವಕರು ಸಮಾಜದ ಮುಖ್ಯವಾಹಿನಿಗೆ ಬರಲಾಗದೇ ಬಹಳ ಕಷ್ಠ ಪಡುವಂತಾಗಿದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ, ಜೇನುಕುರುಬರ ಪರಿಸರದಲ್ಲಿಯೇ ಹುಟ್ಟಿನಿಂದ ಬೆಳೆದು ಪರಂಪರಾನುಗತ ಸಂಸ್ಕೃತಿಯನ್ನು ಆಚರಣೆ ಮಾಡಿಕೊಂಡು ಜೀವಿಸುತ್ತಿದ್ದ ಯುವಕ ರಾಜೇಶ್, ಮುಖ್ಯವಾಹಿನಿ ಸಂಸ್ಕೃತಿಗೆ ಬಂದು ದುರಂತ ಅಂತ್ಯ ಕಂಡದ

ರಾಜೇಶ್ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಬಳ್ಳೆ ಹಾಡಿಯಲ್ಲಿ ಆಡಿ ಬೆಳೆದ ಯುವಕ. ಈತ ಹಳ್ಳಿ ಹೈದ ಪ್ಯಾಟೆಗೆ ಬಂದ ಎಂಬ ರಿಯಾಲಿಟಿ ಶೋ ನಿಂದ ಮುಖ್ಯವಾಹಿನಿ ಜನರಿಗೆ ಪರಿಚಿತವಾದದ್ದು ತಮಗೆಲ್ಲಾ ತಿಳಿದೇ ಇದೆ. ಈತ ತನ್ನ ಸಮುದಾಯವನ್ನು ಬಿಟ್ಟು ಹೊರಬಂದ ಮೇಲೆ ಜಂಗಲ್‌ಜಾಕಿ ಎಂದು ಪ್ರಖ್ಯಾತನಾಗಿದ್ದು ಮಾತ್ರವಲ್ಲದೆ ಲವ್ ಈಸ್ ಪಾಯಿಸನ್ ಎಂಬ ಚಲನಚಿತ್ರದಲ್ಲಿ ನಟಿಸುವುದರ ಮೂಲಕ ಕನ್ನಡ ಚಿತ್ರರಂಗಕ್ಕೆ ಪ್ರವೇಶಿಸಿದ್ದು ಕನ್ನಡ ಚಿತ್ರರಂಗಕ್ಕೆ ಮಾತ್ರವಲ್ಲದೆ ಜೇನುಕುರುಬ ಸಮುದಾಯದವರಿಗೂ ಅಚ್ಚರಿ ಮೂಡಿಸಿತು. ಅನಂತರ ಅಷ್ಟೇ ವೇಗವಾಗಿ ಮುಖ್ಯವಾಹಿನಿ ಒತ್ತಡವನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗದೆ ತನ್ನ ಜೀವವನ್ನೇ ತ್ಯಜಿಸಿದ್ದು ಆಘಾತವನ್ನು ಉಂಟುಮಾಡಿದೆ. ರಾಜೇಶ್‌ರಂತ ಕೆಲವು ವ್ಯಕ್ತಿಗಳನ್ನು ನಾವು ಈ ಸಮುದಾಯದಲ್ಲಿ ಗುರುತಿಸಬಹುದು,ಈರೀತಿಯಾಗಿ ಮುಖ್ಯವಾಹಿನಿ ಸಮುದಾಯದೊಂದಿಗಿನ ಹೊಂದಾಣಿಕೆಯ ಹೋರಾಟಗಳು ಪ್ರಸ್ತುತ ದಿನಗಳಲ್ಲಿ ಅನಿವಾರ್ಯವಾಗಿವೆ. ಆ ಕಾರಣದಿಂದಾಗಿ ಈ ಬುಡಕಟ್ಟು ಸಮೂಹಗಳು ಕೆಲವೊಮ್ಮೆ ಆಕರ್ಷಣೆಗೆ ಒಳಗಾಗಿ ಬದುಕನ್ನು ಕಟ್ಟಿಕೊಳ್ಳುಲು ತಮ್ಮಪಾರಂಪರಿಕ ಜೀವನದ ಸಾಂಸ್ಕೃತಿಕ ಅಂಶಗಳಲ್ಲಿ ತಮ್ಮ ದಿನನಿತ್ಯದ ಬದುಕಿನ ಕ್ರಮಗಳಲ್ಲಿ ಬದಲಾವಣೆಗೆ ಒಳಗಾಗುತ್ತಿದ್ದಾರೆ ಎಂಬುದನ್ನು ತಿಳಿಯಬಹುದಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ನಂಜನಗೂಡು, ಹೆಚ್. ಡಿ. ಕೋಟೆ, ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೋಕುಗಳಲ್ಲಿನ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ನಾಗರೀಕತೆಯ ಮುಖ್ಯವಾಹಿನಿಗೆ ದಾಪುಗಾಲಿರಿಸುತ್ತಾ ಆಧುನಿಕತೆಯತ್ತ

ಮುಖಮಾಡಿರುವುದನ್ನು ಗಮನಿಸಬಹುದಾಗಿದೆ. ಇದಕ್ಕೆ ಉದಾಹರಣೆ, ಮೇಟಿಕುಪ್ಪೆ ಪುನರ್ವಸತಿ ಕೇಂದ್ರ, ಹುಣಸೂರಿನ ನಾಗಾಪುರ ಹಾಡಿಯ ಘಟಕಗಳು ಹಾಗೂ ಇತ್ತೀಚೆಗೆ ಹೆಚ್. ಡಿ. ಕೋಟೆ ತಾಲ್ಲೋಕಿನ ಪುನರ್ವಸತಿಗೊಂಡ ಭೀಮನಹಳ್ಳಿ ಹತ್ತಿರದ ಮಾಸ್ತಿಗುಡಿ ಹಾಡಿಯು ಆಧುನಿಕ ನಾಗರೀಕತೆಯ ಮೂಲ ಸೌಕರ್ಯಗಳನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**

1. ಕೃಷ್ಣ ಅಯ್ಯಂಗಾರ್. ಡಿ. (1956). ಕನ್ನಡ ನಾಡಿನ ಆದಿವಾಸಿಗಳು. (ಮೈಸೂರು ರಾಜ್ಯ). ವಾರ್ತೆ ಇಲಾಖೆ, ಮೈಸೂರು ಸರ್ಕಾರ ಬೆಂಗಳೂರು, 1956. ಪು.ಸಂ. 497
2. ನಂಜುಂಡಯ್ಯ. (2005). ಬೆಟ್ಟಕುರುಬರು. ಇಲ್ಲಿ ಪಾರ್ವತಮ್ಮ, ಸಿ. ಮತ್ತು ರಾಜೇಗೌಡ (ಸಂ). ಆದಿವಾಸಿ ಸಮುದಾಯಗಳ ಬದುಕು ಬವಣೆ, ಗ್ರಾಮೀಣ ಮತ್ತು ಆದಿವಾಸಿ ಅಭಿವೃದ್ಧಿ ಸಂಶೋಧನಾ ಕೇಂದ್ರ. ಮೈಸೂರು–02. ಪು.ಸಂ. 66–77
3. ಶ್ರೀಕಾಂತ್. ಎಸ್ (2002). ಕರ್ನಾಟಕ ಮೂಲನಿವಾಸಿ ಬುಡಕಟ್ಟುಗಳು: ಅವರ ಬದುಕು ಮತ್ತು ಸಂಕಷ್ಟಗಳು. ಇಲ್ಲಿ ಸ್ವಾವಲಂಬನೆಯತ್ತ ಗ್ರಾಮೀಣ ಜನ ಸಮುದಾಯಗಳು, ಸ್ಮರಣ ಸಂಚಿಕೆ, ಫೆವಾರ್ಡ್–ಕರ್ನಾಟಕ. ಬೆಂಗಳೂರು. ಪು.ಸಂ. 1–8
4. ಯಶವಂತ ಕುಮಾರ್ (2016) ಮೈಸೂರು ಜಿಲ್ಲೆ ಜೇನುಕುರುಬ: ಸಾಂಸ್ಕೃತಿಕ ಸ್ಥಿತ್ಯಂತರ ಮಹಾ ಪ್ರಬಂಧ ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
5. ಡಾ. ಎ. ಎಸ್. ಪ್ರಭಾಕರ್, 2008 (ಎರಡನೇ ಆವೃತ್ತಿ). ಆದಿವಾಸಿ ಆಖ್ಯಾನ. ಸಿದ್ದಾರ್ಥ ಪ್ರಕಾಶನ, ಹೊಸಕೋಟೆ.
6. ಎಸ. ಶ್ರೀಕಾಂತ್, 2012 (ಪ್ರಥಮ ಮುದ್ರಣ). ನೈಸರ್ಗಿಕ ಸಂಪನ್ಮೂಲಗಳು ಜನಸಮುದಾಯಗಳ ಆಶ್ರಯತಾಣಗಳು – ಸರ್ಕಾರಿ ಸ್ವತ್ತಗಳಲ್ಲಿ. ಮುದ್ರಕರು, ಕಾಯಕ ಕ್ರಿಯೇಷನ್ಸ್, ನಂ. 738, 5ನೇ ರಸ್ತೆ, ರಮಾನುಜ ರಸ್ತೆ, ಮೈಸೂರು–04
7. ಕಿಕ್ಕೇರಿ ನಾರಾಯಣ, 2011 (ಪ್ರಥಮ ಮುದ್ರಣ). ಜೇನುಕುರುಬ ಬುಡಕಟ್ಟಿನ ಅವ್ಯಕ್ತ ಸಾಂಸ್ಕೃತಿಕ ಪರಂಪರೆ. ಮುದ್ರಣ ಇಂಡ್–ಕಾಮ್. 393, ವೆಲಚೆರಿ ಮುಖ್ಯರಸ್ತೆ, ವಿಜಯನಗರ, ವೆಲಚೆರಿ–600042
8. .ಡಾ. ಸಿ. ಪಾರ್ವತಮ್ಮ ಮತ್ತು ಜಿ. ಎಸ್. ರಾಜೇಗೌಡ, 2005 (ಪ್ರಥಮ ಮುದ್ರಣ). ಪ್ರಕಾಶಕರು, ಆದಿವಾಸಿ ಗ್ರಾಮೀಣ ಮತ್ತು ಆದಿವಾಸಿ ಅಭಿವೃದ್ದಿ ಸಂಶೋಧನಾ ಕೇಂದ್ರ (ಸಿ.ಆರ್.ಆರ್.ಟಿ.ಡಿ), ಮೈಸೂರು–02.